# ದಿನಾಂಕ: 27-06-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 147/2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಂಗ್ರಹಿಸುತ್ತಿರುವ ಕಸವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ನಗರದ ಹೊರವಲಯದಲ್ಲಿ ಎಂಟು ದಿಕ್ಕುಗಳಲ್ಲಿ, ಸರ್ಕಾರಿ ಜಾಗ ಲಭ್ಯವಿರುವ ಜಾಗಗಳಲ್ಲಿ ತಲಾ 500 ಎಕರೆ ಸರ್ಕಾರಿ ಜಾಗವನ್ನು ಗುರುತಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ ಸರ್ಕಾರವನ್ನು ಕೋರಲು ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದು".

ಶ್ರೀ. ಬಿ.ಎಸ್.ಸತ್ಯನಾರಾಯಣ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಂಗ್ರಹಿಸುತ್ತಿರುವ ಕಸವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ನಗರದ ಹೊರವಲಯದಲ್ಲಿ ಎಂಟು ದಿಕ್ಕುಗಳಲ್ಲಿ, ಸರ್ಕಾರಿ ಜಾಗ ಲಭ್ಯವಿರುವ ಜಾಗಗಳಲ್ಲಿ ತಲಾ 500 ಎಕರೆ ಸರ್ಕಾರಿ ಜಾಗವನ್ನು ಗುರುತಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ ಸರ್ಕಾರವನ್ನು ಕೋರಲು ಆಯುಕ್ತರು ಅಗತ್ಯ ಕ್ರಮ ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ ಮೂರ್ತಿ)
ಮಹಾಪೌರರು

# ದಿನಾಂಕ:27–06–2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 148 / 2012–13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣಕ್ಕೆ **"ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ"** ರವರ ಹೆಸರನ್ನು ಹಾಗೂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ **"ನಾಡ ಪ್ರಭು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ"** ಎಂದು ನಾಮಕರಣ ಮಾಡಲು ನಗರ ಪಾಲಿಕೆ ಸಭೆಯಲ್ಲಿ ಈಗಾಗಲೇ ನಿರ್ಣಯ ಮಾಡಲಾಗಿದ್ದು, ನಾಮಕರಣ ಕಾರ್ಯವು ವಿಳಂಬವಾಗುತ್ತಿರುವ ಹಿನ್ನಲೆಯಲ್ಲಿ, ರೈಲ್ವೆ ಇಲಾಖೆ ಮತ್ತು ಕೇಂದ್ರ ಸರ್ಕಾರದ ಅನುಮತಿಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸುವಂತೆ, ರಾಜ್ಯ ಸರ್ಕಾರವನ್ನು ಕೋರಲು ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದು".

ಶ್ರೀ. ಬಿ.ಎಸ್.ಸತ್ಯನಾರಾಯಣ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣಕ್ಕೆ **"ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ"** ರವರ ಹೆಸರನ್ನು ಹಾಗೂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ **"ನಾಡ ಪ್ರಭು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ"** ಎಂದು ನಾಮಕರಣ ಮಾಡಲು ನಗರ ಪಾಲಿಕೆ ಸಭೆಯಲ್ಲಿ ಈಗಾಗಲೇ ನಿರ್ಣಯ ಮಾಡಲಾಗಿದ್ದು, ನಾಮಕರಣ ಕಾರ್ಯವು ವಿಳಂಬವಾಗುತ್ತಿರುವ ಹಿನ್ನಲೆಯಲ್ಲಿ, ರೈಲ್ವೆ ಇಲಾಖೆ ಮತ್ತು ಕೇಂದ್ರ ಸರ್ಕಾರದ ಅನುಮತಿಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸುವಂತೆ, ರಾಜ್ಯ ಸರ್ಕಾರವನ್ನು ಕೋರಲು ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:27-06-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 149 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ದಿನೇ ದಿನೇ ಜನ ಸಂಖ್ಯೆ ಹೆಚ್ಚಾಗುತ್ತಿದ್ದು, ಕುಡಿಯುವ ನೀರಿಗಾಗಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಇದೇ ರೀತಿ ಮುಂದುವರೆದರೆ, ಮುಂದಿನ ಹತ್ತಿಪ್ಪತ್ತು ವರ್ಷಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗಿ ಸಂಕಷ್ಟದ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗೆ ಶಾಶ್ವತ ಪರಿಹಾರಕ್ಕಾಗಿ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವುದು ಸೂಕ್ತವಾಗಿದ್ದು, ಎತ್ತಿನ ಹೊಳೆ, ಭದ್ರಾ, ಹೇಮಾವತಿ ನದಿಗಳಿಂದ 3000 ಎಂ.ಎಲ್.ಡಿ. ನೀರನ್ನು ಬೆಂಗಳೂರಿಗೆ ತರುವ ಬಗ್ಗೆ ಅಗತ್ಯ ಕಾರ್ಯಕ್ರಮ ರೂಪಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮತ್ತು ಸರ್ಕಾರವನ್ನು ಕೋರಲು ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದು".

ಶ್ರೀ. ಬಿ.ಎಸ್.ಸತ್ಯನಾರಾಯಣ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ದಿನೇ ದಿನೇ ಜನ ಸಂಖ್ಯೆ ಹೆಚ್ಚಾಗುತ್ತಿದ್ದು, ಕುಡಿಯುವ ನೀರಿಗಾಗಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಇದೇ ರೀತಿ ಮುಂದುವರೆದರೆ, ಮುಂದಿನ ಹತ್ತಿಪ್ಪತ್ತು ವರ್ಷಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗಿ ಸಂಕಷ್ಟದ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗೆ ಶಾಶ್ವತ ಪರಿಹಾರಕ್ಕಾಗಿ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವುದು ಸೂಕ್ತವಾಗಿದ್ದು, ಎತ್ತಿನ ಹೊಳೆ, ಭದ್ರಾ, ಹೇಮಾವತಿ ನದಿಗಳಿಂದ 3000 ಎಂ.ಎಲ್.ಡಿ. ನೀರನ್ನು ಬೆಂಗಳೂರಿಗೆ ತರುವ ಬಗ್ಗೆ ಅಗತ್ಯ ಕಾರ್ಯಕ್ರಮ ರೂಪಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮತ್ತು ಸರ್ಕಾರವನ್ನು ಕೋರಲು ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:27-06-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 150 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಾಹನ ದಟ್ಟಣೆ ಹೆಚ್ಚಾಗಿರುವ ರಸ್ತೆಗಳಲ್ಲಿ ಪಾದಚಾರಿಗಳು ಸುರಕ್ಷತೆಯಿಂದ ರಸ್ತೆಯನ್ನು ದಾಟಲು ಸುಮಾರು 120 ಸ್ಕೈವಾಕ್‌ಗಳನ್ನು ನಿರ್ಮಿಸಲು ಸ್ಥಳಗಳನ್ನು ಗುರುತಿಸಿದ್ದು, ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಹಾಗೂ ಸದರಿ ಯೋಜನೆಯಲ್ಲಿ ಎಲ್ಲಾ ಏಜೆನ್ಸಿಗಳು ಭಾಗವಹಿಸಲು ಅನುಕೂಲವಾಗುವಂತೆ ಪ್ಯಾಕೇಜ್‌ಗಳಾಗಿ ವಿಭಜಿಸಿ ಒಂದು ಪ್ಯಾಕೇಜ್‌ನಲ್ಲಿ ಸುಮಾರು 10 ರಿಂದ 15 ಸ್ಥಳಗಳನ್ನು ಕ್ರೋಢಿಕರಿಸಿ ಅಂದರೆ ಹಲವಾರು Financial feasibility ಸ್ಥಳಗಳು ಹಾಗೂ ಹಲವಾರು Financially non-feasible ಸ್ಥಳಗಳನ್ನು ಗಣನೆಗೆ ತೆಗೆದುಕೊಂಡು ಪ್ಯಾಕೇಜ್ ಮಾಡಿ, ಸದರಿ ಸ್ಕೈವಾಕ್ ಯೋಜನೆಗಳಲ್ಲಿ ಪಾಲಿಕೆಯ ವತಿಯಿಂದ ಯಾವುದೇ ರೀತಿಯ ಆರ್ಥಿಕ ಹೊರಬೀಳದಂತೆ, ಪಿ.ಪಿ.ಪಿ. ಮಾದರಿಯಲ್ಲಿ ನಿರ್ಮಿಸುವ ಬಗ್ಗೆ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಆಯುಕ್ತರು ಅಗತ್ಯ ಕ್ರಮವಹಿಸುವುದು".

ಶ್ರೀ. ಬಿ.ಎಸ್.ಸತ್ಯನಾರಾಯಣ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಾಹನ ದಟ್ಟಣೆ ಹೆಚ್ಚಾಗಿರುವ ರಸ್ತೆಗಳಲ್ಲಿ ಪಾದಚಾರಿಗಳು ಸುರಕ್ಷತೆಯಿಂದ ರಸ್ತೆಯನ್ನು ದಾಟಲು ಸುಮಾರು 120 ಸ್ಕೈವಾಕ್‌ಗಳನ್ನು ನಿರ್ಮಿಸಲು ಸ್ಥಳಗಳನ್ನು ಗುರುತಿಸಿದ್ದು, ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಹಾಗೂ ಸದರಿ ಯೋಜನೆಯಲ್ಲಿ ಎಲ್ಲಾ ಏಜೆನ್ಸಿಗಳು ಭಾಗವಹಿಸಲು ಅನುಕೂಲವಾಗುವಂತೆ ಪ್ಯಾಕೇಜ್‌ಗಳಾಗಿ ವಿಭಜಿಸಿ ಒಂದು ಪ್ಯಾಕೇಜ್‌ನಲ್ಲಿ ಸುಮಾರು 10 ರಿಂದ 15 ಸ್ಥಳಗಳನ್ನು ಕ್ರೋಢಿಕರಿಸಿ ಅಂದರೆ ಹಲವಾರು Financial feasibility ಸ್ಥಳಗಳು ಹಾಗೂ ಹಲವಾರು Financially non-feasible ಸ್ಥಳಗಳನ್ನು ಗಣನೆಗೆ ತೆಗೆದುಕೊಂಡು ಪ್ಯಾಕೇಜ್ ಮಾಡಿ, ಸದರಿ ಸ್ಕೈವಾಕ್ ಯೋಜನೆಗಳಲ್ಲಿ ಪಾಲಿಕೆಯ ವತಿಯಿಂದ ಯಾವುದೇ ರೀತಿಯ ಆರ್ಥಿಕ ಹೊರಬೀಳದಂತೆ, ಪಿ.ಪಿ.ಪಿ. ಮಾದರಿಯಲ್ಲಿ ನಿರ್ಮಿಸುವ ಬಗ್ಗೆ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಆಯುಕ್ತರು ಕ್ರಮವಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ: 27-06-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

## ವಿಷಯದ ಸಂಖ್ಯೆ : 151 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಹಿರಿಯ ಧುರೀಣರಾದ ಶ್ರೀ. ಕೆ. ಶ್ರೀರಾಮುಲುರವರು ದಿನಾಂಕ:21-06-2012ರಂದು ದೈವಾಧೀನರಾದರೆಂದು ತಿಳಿಸಲು ದು:ಖವಾಗುತ್ತದೆ. ದಿವಂಗತರು 1959 ರಲ್ಲಿ ಬೆಂಗಳೂರು ನಗರ ಪಾಲಿಕೆಯ ಉಪ ಮೇಯರ್ ಆಗಿ ಬೆಂಗಳೂರು ನಗರದ ಅಭಿವೃದ್ಧಿಗೆ ತಮ್ಮ ಅಮೂಲ್ಯ ಸೇವೆ ಸಲ್ಲಿಸಿದ್ದು, ಶ್ರೀರಾಮಪುರ ವಾರ್ಡಿನಿಂದ ಮೊದಲ ಬಾರಿಗೆ ನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿದ್ದರು. ದಿವಂಗತ ದೇವರಾಜ ಅರಸು ರವರ ಸಚಿವ ಸಂಪುಟದಲ್ಲಿ ಕಾರ್ಮಿಕ ಸಚಿವರಾಗಿಯೂ ಸೇವೆ ಸಲ್ಲಿಸಿದ್ದು, ದಿವಂಗತರು ರಾಜ್ಯಕ್ಕೆ ಮತ್ತು ಬೆಂಗಳೂರು ನಗರದ ಅಭಿವೃದ್ಧಿಗೆ ಸಲ್ಲಿಸಿರುವ ಸೇವೆಯನ್ನು ನಾವು ಸ್ಮರಿಸಬೇಕಾಗಿದೆ.

ದಿವಂಗತರ ಅಗಲಿಕೆಯಿಂದಾಗಿ ಒಬ್ಬ ಧೀಮಂತ ರಾಜಕಾರಣಿಯನ್ನು ಕಳೆದುಕೊಂಡಂತಾಗಿದ್ದು, ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿ ದೊರೆಯಲೆಂದು ಹಾಗೂ ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಪ್ರಾರ್ಥಿಸುತ್ತೇನೆ".

ಶ್ರೀ. ಬಿ.ಎಸ್.ಸತ್ಯನಾರಾಯಣ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಹಿರಿಯ ಧುರೀಣರಾದ ಶ್ರೀ.ಕೆ.ಶ್ರೀರಾಮುಲುರವರು ದಿನಾಂಕ:21-06-2012 ರಂದು ದೈವಾಧೀನರಾದರೆಂದು ತಿಳಿಸಲು ದು:ಖವಾಗುತ್ತದೆ. ದಿವಂಗತರು 1959 ರಲ್ಲಿ ಬೆಂಗಳೂರು ನಗರ ಪಾಲಿಕೆಯ ಉಪ ಮೇಯರ್ ಆಗಿ ಬೆಂಗಳೂರು ನಗರದ ಅಭಿವೃದ್ಧಿಗೆ ತಮ್ಮ ಅಮೂಲ್ಯ ಸೇವೆ ಸಲ್ಲಿಸಿದ್ದು, ಶ್ರೀರಾಮಪುರ ವಾರ್ಡಿನಿಂದ ಮೊದಲ ಬಾರಿಗೆ ನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿದ್ದರು. ದಿವಂಗತ ದೇವರಾಜ ಅರಸು ರವರ ಸಚಿವ ಸಂಪುಟದಲ್ಲಿ ಕಾರ್ಮಿಕ ಸಚಿವರಾಗಿಯೂ ಸೇವೆ ಸಲ್ಲಿಸಿದ್ದು, ದಿವಂಗತರು ರಾಜ್ಯಕ್ಕೆ ಮತ್ತು ಬೆಂಗಳೂರು ನಗರದ ಅಭಿವೃದ್ಧಿಗೆ ಸಲ್ಲಿಸಿರುವ ಸೇವೆಯನ್ನು ನಾವು ಸ್ಮರಿಸಬೇಕಾಗಿದೆ.

ದಿವಂಗತರ ಅಗಲಿಕೆಯಿಂದಾಗಿ ಒಬ್ಬ ಧೀಮಂತ ರಾಜಕಾರಣಿಯನ್ನು ಕಳೆದುಕೊಂಡಂತಾಗಿದ್ದು, ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿ ದೊರೆಯಲೆಂದು ಹಾಗೂ ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಈ ಸಭೆಯು ಪ್ರಾರ್ಥಿಸುತ್ತದೆ".

(ಡಿ.ವೆಂಕಟೇಶ್-ಮೂರ್ತಿ)
ಮಹಾಪೌರರು